# ಬಾಶೆಟ್ಟಿಹಳ್ಳಿಯಲ್ಲಿ ಮಾದರಿ ಕಲಿಕಾ ಕೇಂದ್ರ

## 50 ಅಂಗನವಾಡಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಶ್ರಮ: ಅರ್ಚನಾ



**ದೊಡ್ಡಬಳ್ಳಾಪುರ ತಾಲೂಕಿನ ಬಾಶೆಟ್ಟಿಯಳ್ಳಿ ಅಂಗನವಾಡಿ ಮಾದರಿ ಕಲಿಕಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಾಲ ರಕ್ಷಾ ಭಾರತ್ ಸಂಸ್ಥೆ ಮುಖ್ಯಸ್ಥೆ ಅರ್ಚನಾ ರಾಜ್ ಮಾತನಾಡಿದರು.**

**ದೊಡ್ಡಬಳ್ಳಾಪುರ:** 3 ರಿಂದ 6 ವರ್ಷಗಳ ಮಕ್ಕಳ ಚಟುವಟಿಕೆ ಹಾಗೂ ಪಡೆಯುವ ಶಿಕ್ಷಣ ಅವರ ಮುಂದಿನ ಭವಿಷ್ಯಕ್ಕೆ ದಾರಿದೀಪವಾಗಲಿದೆ. ಈ ನಿಟ್ಟಿನಲ್ಲಿ ತಾಲೂಕಿನ 50 ಅಂಗನವಾಡಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಬಾಶೆಟ್ಟಿಹಳ್ಳಿಯಲ್ಲಿ ಮಾದರಿ ಕಲಿಕಾ ಕೇಂದ್ರ ತೆರೆಯುವ ಮೂಲಕಮಕ್ಕಳಶ್ರೇಯೋಭಿವೃದ್ಧಿಗಾಗಿ ಶ್ರಮಿಸಲಾಗುತ್ತಿದೆ ಎಂದು ಬಾಲ ರಕ್ಷಾ ಭಾರತ್ ಸಂಸ್ಥೆ ಮುಖ್ಯಸ್ಥೆ ಅರ್ಚನಾ ರಾಜ್ ತಿಳಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇವ್ ದ ಚಿಲ್ಡ್ರನ್-ಬಾಲ ರಕ್ಷಾ ಭಾರತ್, ಮಕ್ಕಳ ಜಾಗೃತಿ ಸಂಸ್ಥೆ, ಶಾಲಾ ಪೂರ್ವ ಶಿಕ್ಷಣ ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ತಾಲೂಕಿನ ಬಾಶೆಟ್ಟಿಯಳ್ಳಿ ಅಂಗನವಾಡಿ ಮಾದರಿ ಕಲಿಕಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

**ಮಾದರಿ ಕಲಿಕಾ ಕೇಂದ್ರ:** ಮಕ್ಕಳ ಪ್ರಾಥಮಿಕ ಕಲಿಕೆಗೆ ಖಾಸಗಿಯಾಗಿ ಹಲವಾರು ನರ್ಸರಿ ಶಾಲೆಗಳು, ಪ್ಲೇ ಹೋಂಗಳು ಇವೆ. ಆದರೆ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಇದು ಹೊರೆ. ಇದನ್ನು ಮನಗಂಡ ನಮ್ಮ ಸಂಸ್ಥೆ ವತಿಯಿಂದ ಮಕ್ಕಳಿಗೆ ಪ್ಲೇ ಹೋಂ ವಾತಾವರಣದೊಂದಿಗೆ ಸೃಜನಶೀಲ ಶಿಕ್ಷಣ ಹಾಗೂ ಆರೋಗ್ಯ ನೀಡಲು ಮಾದರಿ ಕಲಿಕಾ ಕೇಂದ್ರ ತೆರೆಯಲಾಗಿದೆ. ಮಕ್ಕಳಿಗೆ ವಿವಿಧ ಆಟಪಾಟಗಳು, ಕಲಿಕೆ ಎಲ್ಲ ಒಳಗೊಂಡಿರುತ್ತದೆ. ಸೇವ್ ದ ಚಿಲ್ಡ್ರನ್ ಅಂತಾರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದರು.

**ಪೋಷಕರು ಸಂಸ್ಥೆಯೊಂದಿಗೆ ಸಹಕರಿಸಿ:** ಮಕ್ಕಳ ಜಾಗೃತಿ ವ್ಯವಸ್ಥಾಪಕ ಮುರಳಿ ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೊಡ್ಡಬಳ್ಳಾಪುರ ತಾಲೂಕನ್ನು ಆಯ್ಕೆ ಮಾಡಿಕೊಂಡು, 50 ಅಂಗನವಾಡಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಮಾಡಲಾಗುತ್ತಿದೆ. ಕೈಗಾರಿಕಾ ಪ್ರದೇಶದಲ್ಲಿ ಉದ್ಯೋಗಕ್ಕೆ ತೆರಳುವ ಪೋಷಕರು ಹೆಚ್ಚಾಗಿ ಇರುವುದರಿಂದ ಬಾಶೆಟ್ಟಿಯಳ್ಳಿ ಆಯ್ಕೆ ಮಾಡಿಕೊಳ್ಳಲಾಗಿದೆ. ಪೋಷಕರು ಸಂಸ್ಥೆಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

ಬಾಶೆಟ್ಟಿಹಳ್ಳಿ ಪಿಡಿಒ ಕುಮಾರ್ ಮಾತನಾಡಿ, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ನಮ್ಮ ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿಕೊಂಡಿರುವುದು ಸಂತಸದ ವಿಚಾರ. ಗ್ರಾಮಸ್ಥರ ಸಹಕಾರದೊಂದಿಗೆ ಗ್ರಾಪಂನಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಾಪಂ ಸದಸ್ಯೆ ರೇಣುಕಾ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಶೋಭಾ, ಬಾಶೆಟ್ಟಿಹಳ್ಳಿ ಗ್ರಾಪಂ ಸದಸ್ಯರಾದ ಕೃಷ್ಣಪ್ಪ, ರಾಧಾಮಣಿ, ನೇತ್ರಾವತಿ, ರತ್ನಮ್ಮ, ಶೋಭಾ, ಚಂದ್ರಶೇಖರ್, ಹಾಗೂ ಅಂಗನವಾಡಿ ಶಿಕ್ಷಕರು, ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.